# ಕೋವಿಡ್-19 ಲಸಿಕೆ:

# ತಪ್ಪು ಸುದ್ದಿ ಮತ್ತು ಸತ್ಯ ಆಧಾರಗಳು

### ತಪ್ಪು ಸುದ್ದಿ

**ಕೋವಿಡ್-19 ಲಸಿಕೆ ಪಡೆದರೆ ಕೋವಿಡ್-19 ಅಂಟಿಕೊಳ್ಳುತ್ತದೆ.**

### ಸತ್ಯ ಆಧಾರಗಳು

ಕೋವಿಡ್-19 ಲಸಿಕೆಗಳು ಹಲವು: ದುರ್ಬಲ ಅಥವ ನಿಷ್ಕ್ರಿಯೆಗೊಳಿಸಿರುವ ವೈರಸ್ ನ ಲಸಿಕೆ, mRNA ಲಸಿಕೆ, ಪ್ರೋಟೀನ್ ಅಂಶದ ಲಸಿಕೆ, ಮತ್ತು ಹೆಚ್ಚದಿರುವ ವೈರಸ್ ಲಸಿಕೆ. ಈ ಯಾವ ಲಸಿಕೆಗಳಿಂದಲೂ ಕೋವಿಡ್-19 ಉಂಟಾಗುವ ಕರೋನ ವೈರಸ್ ಉತ್ಪತ್ತಿ ಯಾಗುವುದಿಲ್ಲ. ಕೆಲವು ವರದಿಗೊಂಡ ಸಂದರ್ಭಗಳಲ್ಲಿ ಲಸಿಕೆ ಪಡಿಯುವ ಮುನ್ನವೇ ಕೋವಿಡ್-19 ತಾಗಿರುತ್ತವೆ ; ಲಸಿಕೆಯಿಂದ ಕೋವಿಡ್-19 ಬಂದಿರುವ ಸಂಧರ್ಬಗಳಿಲ್ಲ.

### ತಪ್ಪು ಸುದ್ದಿ

**ಕೋವಿಡ್-19 ಲಸಿಕೆಯ ಅಡ್ಡ ಪರಿಣಾಮಗಳು ಬಹಳ ಅಪಾಯಕಾರಿ.**

### ಸತ್ಯ ಆಧಾರಗಳು

ಕೋವಿಡ್-19 ಲಸಿಕೆಯ ಅಡ್ಡ ಪರಿಣಾಮಗಳು:
ಲಸಿಕೆ ಪಡೆದ ಸ್ಥಳದಲ್ಲಿ ನೋವು, ತಲೆನೋವು, ಸುಸ್ತು ಮತ್ತು ಮಾಂಸಖಂಡಗಳಲ್ಲಿ ನೋವು - ಸಾದಾರಣವಾಗಿ ಇವು ಸಣ್ಣ ಪ್ರಮಾಣದ ತೊಂದರೆಗಳು - ಗಂಭೀರ ಅಥವಾ ಅಪಾಯ ಉಂಟುಮಾಡುವುದಲ್ಲ. ಅದರಿಂದಾಗುವ ಪ್ರಯೋಜನಗಳು ಕೆಲವು ಸಣ್ಣ ಅಪಾಯಗಳಿಗಿಂತ ಹೆಚ್ಚು.

### ತಪ್ಪು ಸುದ್ದಿ

**ಕೋವಿಡ್-19 ಲಸಿಕೆಯಿಂದ ಕೆಲವರು ಸಾವನ್ನಪಿದ್ದಾರೆ.**

### ಸತ್ಯ ಆಧಾರಗಳು

ವಿಶ್ವದಾದ್ಯಂತ ಲಸಿಕೆ ಪಡೆದಿರುವವರಲ್ಲಿ ಶೇಖಡ 0.00045% ಮಾತ್ರ ಸಾವನ್ನಪಿದ್ದಾರೆ, ಮತ್ತು ಇದರ ಪರಿಶೋಧನೆ ನಡೆಯುತ್ತಿದೆ. ಅರೋಗ್ಯ ತಜ್ಞರು ಗಮನಿಸಿರುವಂತೆ ಸತ್ತವರಲ್ಲಿ ಹಿರಿಯ ಮತ್ತು ನಿಶಕ್ತ ರೋಗಿಗಳ ರೋಗ ಕಾರಣವಾಗಿದ್ದು, ಅವರು ಲಸಿಕೆ ಪಡೆದ ಸಮಯ ಇದಕ್ಕೆ ಕಾಕತಾಳೀಯ.

### ತಪ್ಪು ಸುದ್ದಿ

**ಗರ್ಭಿಣಿಯರಿಗೆ, ಮಕ್ಕಳಿಗೆ ಮತ್ತು ಅನಾರೋಗ್ಯದ ಹಿನ್ನಲೆ ಇರುವ ಇರುವವರಿಗೆ ಕೋವಿಡ್-19 ಲಸಿಕೆ ಸಿಗುವುದಿಲ್ಲ.**

### ಸತ್ಯ ಆಧಾರಗಳು

ಅರೋಗ್ಯ ತಜ್ಞರು ಪ್ರಕಾರ ಗರ್ಭಿಣಿಯರು ಮತ್ತು ಅನಾರೋಗ್ಯದ ಹಿನ್ನಲೆ ಇರುವವರಿಗೆ ಕೋವಿಡ್-19 ತಗಲುವ ಸಾಧ್ಯತೆ ಹೆಚ್ಚಾಗಿರುವುದರಿಂದ ಇಂಥವರು ಲಸಿಕೆಯನ್ನು ಪಡೆಯಬೇಕು. ಆದರೆ, ಎಲ್ಲಾ ಔಷಧಿಗಳಂತೆ, ಲಸಿಕೆ ಪಡೆಯುವ ಮುನ್ನ ತಮ್ಮ ವೈದ್ಯರ ಸಲಹೆಯನ್ನು ಪಡೆಯಬೇಕು.

### ತಪ್ಪು ಸುದ್ದಿ

**ನನಗೆ ಕೋವಿಡ್-19 ಈಗಾಗಲೇ ಬಂದ್ಹಿರುವ ಕಾರಣ ನಾನು ಲಸಿಕೆಯನ್ನು ಪಡೆಯಬೇಕಾಗಿಲ್ಲ.**

### ಸತ್ಯ ಆಧಾರಗಳು

ಸೋಂಕು ತಟ್ಟಿ ಚೇತರಿಸಿಕೊಂಡಿರುವವರಿಗೆ ಮತ್ತೆ ಸೋಂಕು ತಟ್ಟುವ ಸಾಧ್ಯತೆಗಳು ಹೆಚ್ಚಾಗಿರುವುದು ಕಂಡುಬಂದಿದೆ. ಅವರು ರೋಗದಿಂದ ಹೆಚ್ಚುಕಾಲದ ವಿನಾಯಿತಿಯನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಕೋವಿಡ್-19 ಇಂದ ಚೇತರಿಸಿಕೊಂಡಿರುವವರೂ ಲಸಿಕೆಯನ್ನು ಪಡೆಯಬೇಕು.

### ತಪ್ಪು ಸುದ್ದಿ

**ಲಸಿಕೆಯ ಬದಲು ನೈಸರ್ಗಿಕ ಮತ್ತು ಗಿಡಮೂಲಿಕೆಗಳ ಔಷದಿಗಳು ತೆಗೆದುಕೊಳ್ಳಬಹುದು.**

### ಸತ್ಯ ಆಧಾರಗಳು

ನೈಸರ್ಗಿಕ ಮತ್ತು ಗಿಡಮೂಲಿಕೆಗಳ ಔಷದಿಗಳು ದೇಹದ ವಿನಾಯಿತಿಯನ್ನು ಹೆಚ್ಚಿಸ ಬಹುದು. ಅದರಿಂದ ಕರೋನ ಅಥವ ಕೋವಿಡ್-19 ತಡೆಗಣಿಸಲು ಸಾಧ್ಯವಿಲ್ಲ.

### ತಪ್ಪು ಸುದ್ದಿ

**ವಿನಾಯಿತಿ ಲಸಿಕೆಗಿಂತ ನೈಸರ್ಗಿಕ ರಕ್ಷಣೆ ಪಡೆಯುವುದು ಉತ್ತಮ.**

### ಸತ್ಯ ಆಧಾರಗಳು

ಜನರಲ್ಲಿ ಎರಡನೇ ಬಾರಿ ಸೋಂಕು ತಟ್ಟುತಿರುವುದು ನೈಸರ್ಗಿಕ ರಕ್ಷಣೆಯಾಗದಿರುವ ಕಾರಣ. ಕೋವಿಡ್-19ನ ಧೀರ್ಘ ಪರಿಣಾಮಗಳನ್ನು ಪರಿಶೀಲಿಸಲಾಗುತ್ತಿದೆ. ಅದರಿಂದ ಕೋವಿಡ್-19ನ ಧೀರ್ಘ ಪರಿಣಾಮಗಳನ್ನು ಅನುಭವಿಸುವುದಕ್ಕಿಂತ ಅದರ ವಿರುದ್ದ ಲಸಿಕೆ ಪಡೆಯುವುದು ಒಳ್ಳೆಯದು. ಸೋಂಕು ಹರಡುವುದು ತಡೆಗಟ್ಟಲು, ನಮ್ಮ ಆರೋಗ್ಯ ವ್ಯವಸ್ಥೆಯ ಮೇಲೆ ಬೀಳುತ್ತಿರುವ ಭಾರ ತಗ್ಗಿಸಲು ಮತ್ತು ಬೇರೆಯವರಿಗೆ ಸಹಾಯ ಮಾಡಲು ಕೋವಿಡ್-19 ಲಸಿಕೆ ತೆಗೆದುಕೊಳ್ಳುವುದು ಅಗತ್ಯ.

### ತಪ್ಪು ಸುದ್ದಿ

**ವಿನಾಯಿತಿ ಲಸಿಕೆಗಿಂತ ನೈಸರ್ಗಿಕ ರಕ್ಷಣೆ ಪಡೆಯುವುದು ಉತ್ತಮ.**

### ಸತ್ಯ ಆಧಾರಗಳು

ಜನರಲ್ಲಿ ಎರಡನೇ ಬಾರಿ ಸೋಂಕು ತಟ್ಟುತಿರುವುದು ನೈಸರ್ಗಿಕ ರಕ್ಷಣೆಯಾಗದಿರುವ ಕಾರಣ. ಕೋವಿಡ್-19ನ ಧೀರ್ಘ ಪರಿಣಾಮಗಳನ್ನು ಪರಿಶೀಲಿಸಲಾಗುತ್ತಿದೆ. ಅದರಿಂದ ಕೋವಿಡ್-19ನ ಧೀರ್ಘ ಪರಿಣಾಮಗಳನ್ನು ಅನುಭವಿಸುವುದಕ್ಕಿಂತ ಅದರ ವಿರುದ್ದ ಲಸಿಕೆ ಪಡೆಯುವುದು ಒಳ್ಳೆಯದು. ಸೋಂಕು ಹರಡುವುದು ತಡೆಗಟ್ಟಲು, ನಮ್ಮ ಆರೋಗ್ಯ ವ್ಯವಸ್ಥೆಯ ಮೇಲೆ ಬೀಳುತ್ತಿರುವ ಭಾರ ತಗ್ಗಿಸಲು ಮತ್ತು ಬೇರೆಯವರಿಗೆ ಸಹಾಯ ಮಾಡಲು ಕೋವಿಡ್-19 ಲಸಿಕೆ ತೆಗೆದುಕೊಳ್ಳುವುದು ಅಗತ್ಯ.